


ಒಂದು ಊರಿನಲ್ಲಿ ಒಬ್ಬರು ಹಿರಿಯ ಸಾಧಕರಿದ್ದರು. ಅವರು ಒಮ್ಮೆ "ಸಂಸಾರಿಗಳಿಗೆ ಸತ್ಸಂಗ ಬಹಳ ಆವಶ್ಯಕ" ಎಂದು ತಮ್ಮ ಶಿಷ್ಯರಿಗೆ ಹೇಳಿದರು. ಆದರೆ ಶಿಷ್ಯರಿಗೆ ಅದನ್ನು ನಂಬಲಾಗಲಿಲ್ಲ. ಇದನ್ನರಿತ ಗುರುಗಳು ಅವರನ್ನು ಏರಿಯ ಕಡೆಗೆ ಕರೆದುಕೊಂಡು ಬಂದರು. ಎಲ್ಲರ ಕೈಗೆ ಒಂದೊಂದು ಕಲ್ಲನ್ನು ಕೊಟ್ಟು "ಇವನ್ನು ನೀರಿಗೆ ಬಿಸಾಕಿ. ಹಾಗೆ ಎಸೆದಾಗ ಕಲ್ಲುಗಳು ತೇಲುವುವೇ ನೋಡಿ" ಎಂದರು. ಶಿಷ್ಯರು ಕಲ್ಲನ್ನು ನೀರಿಗೆ ಎಸೆದಾಗ ಎಲ್ಲ ಕಲ್ಲುಗಳೂ ನೀರಿನಲ್ಲಿ ಮುಳುಗಿ ಹೋದವು. ಗುರುಗಳು ಕೇಳಿದರು, "ಕಲ್ಲುಗಳು ತೇಲಲಿಲ್ಲವೇ?" ಶಿಷ್ಯರೆಲ್ಲ, "ತೇಲಲಿಲ್ಲ ಗುರುಗಳೇ" ಎಂದರು. "ನೀವು ಸ್ವಲ್ಪ ಹೊತ್ತಿನ ನಂತರ ಬನ್ನಿ. ನಾನು ಕಲ್ಲುಗಳು ಹೇಗೆ ತೇಲಬಲ್ಲವು ಎಂಬುದನ್ನು ತೋರಿಸುತ್ತೇನೆ" ಎಂದು ಹೇಳಿದರು. ಸ್ವಲ್ಪ ಸಮಯದ ನಂತರ ಶಿಷ್ಯರು ಬಂದು ನೋಡಿದಾಗ ನೀರಿನ ಮೇಲೆ ಒಂದು ದೊಡ್ಡ ಕಲ್ಲು ತೇಲುತ್ತಿದೆ! ಅದು ಹೇಗೆ ಎಂದು ಶಿಷ್ಯರು ಪರೀಕ್ಷಿಸಿದಾಗ, ದೊಡ್ಡ ದೊಡ್ಡ ತೊಲೆಗಳನ್ನು ಕಟ್ಟಿ ಅದರ ಮೇಲೆ ಕಲ್ಲನ್ನು ಇಡಲಾಗಿತ್ತು. ಆದ್ದರಿಂದ ಅದು ತೇಲುತ್ತಿತ್ತು! ಶಿಷ್ಯರು ಹೇಳಿದರು, "ಇದರಲ್ಲೇನು ವಿಶೇಷ, ಗುರುಗಳೇ? ಕೆಳಗೆ ಮರದ ದಿಮ್ಮಿಗಳಿರುವುದರಿಂದ, ಕಲ್ಲು ನೀರಿನ ಮೇಲೆ ತೇಲುತ್ತಿದೆ, ಅಷ್ಟೆ." ಗುರುಗಳು ಹೇಳಿದರು, "ಸಾಧುಸಂತರ ಜೀವನ ಆ ತೊಲೆಗಳಂತೆ ಮುಕ್ತಜೀವನ. ಸಂಸಾರಿಗಳು ಕಲ್ಲಿನಂತೆ. ಸಾಧುಸಂಗದಿಂದ ಸಂಸಾರಿಗಳ ಜೀವನ ಈ ಸಂಸಾರಸಾಗರದಲ್ಲಿ ಹಗುರವಾಗಿ ತೇಲುತ್ತದೆ. ಅವರ ಸತ್ಸಂಗ ದೊರೆತಾಗ ಸಂಸಾರಿಗಳು ಸಂಸಾರಸಾಗರದಲ್ಲಿ ಉಂಟಾಗುವ ಕಷ್ಟನಷ್ಟಗಳನ್ನು ಎದುರಿಸುವ ಮನೋಸ್ಥೈರ್ಯವನ್ನು ಪಡೆದುಕೊಳ್ಳುತ್ತಾರೆ" ಎಂದರು. ಹೀಗೆ ಜೀವನದಲ್ಲಿ ಮಹಾಪುರುಷರ ಆಶ್ರಯ ಸಿಕ್ಕಿದರೆ ಆಧ್ಯಾತ್ಮಿಕ ಉನ್ನತಿ ಸುಲಭವಾಗುತ್ತದೆ. ✪

**ಸಂಗ್ರಹ : ಸ್ವಾಮಿ ಗೌತಮಾನಂದಜಿ, ಚೆನ್ನೈ.**

**ಚಿತ್ರ : ಬ್ರ. ಅದ್ವೈತ ಚೈತನ್ಯ**

